Reminder leater

ರವರಿಗೆ. 080-22254102 ದಿನಾಂಕ: 25-02-2026

ಮಾನ್ಯ ಗೌರವಾನ್ವಿತ ಘನವೆತ್ತ ರಾಜ್ಯಪಾಲರು,
ಕರ್ನಾಟಕ ರಾಜ್ಯ, ರಾಜ್ಯಭವನ,
ಡಾ. ಬಿ.ಆರ್.ಅಂಬೇಡ್ಕರ್ ವಿಧಿ, ಬೆಂಗಳೂರು. 560001

KARNATAKA GOVERNOR'S SECRETARIAT No. 1816 25 FEB 2026 RECEIVED RAJ BHAVAN, BENGALURU

ಇವರಿಂದ,

ಆನಂದ

S/O ಬೈರಪ್ಪ,ಕೊಡಿಯಾಲ ಗ್ರಾಮ, ಮತ್ತು ಪೋಸ್ಟ್,
ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೋಕು, ಮಂಡ್ಯ ಜಿಲ್ಲೆ, -571415

ವಿಷಯ: ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರ ವಿರುದ್ಧ ಮತ್ತು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರ ವಿರುದ್ಧ ಭಾರತೀಯ ನ್ಯಾಯಾ ಸಂಹಿತೆ-2023 ಕಲಂ 2(1,7,9,14,15,24,25,37), 3 (5, 6, 7, 8, 9) 51, 52, 53, 59, 61, 198, 318, 324, ರಂತೆ ದೂರು ದಾಖಲಿಸಿ ನ್ಯಾಯಾಧೀಕರಣ ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಿ.

==================

ಗೌರವಾನ್ವಿತರಾದ ತಮ್ಮಲ್ಲಿ ವಿನಂತಿಸಿ ತಿಳಿಸುವುದೆನಂದರೆ,

1. ಕರ್ನಾಟಕದ ರಾಜ್ಯ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಇವರುಗಳು ಭಾರತದ ಸಂವಿಧಾನದಲ್ಲಿನ ತತ್ವಾಂಶಗಳನ್ನು, ಮೌಲ್ಯಗಳನ್ನು, ಅನುಸರಿಸುವುದು, ಕಾಪಾಡುವುದು, ಸಂವಿಧಾನದ ಎಲ್ಲಾ ವಿಧಿಯನ್ನು ಕಾಪಡುವುದು, ಹಾಗು ಸಂವಿಧಾನಿಕವಾದ ಎಲ್ಲಾ ವಿಧಿಯನ್ನು ಎತ್ತಿ ಹಿಡಿಯುವುದು, ಸಂವಿಧಾನಿಕವಾದ ಮೌಲ್ಯಗಳನ್ನು ರಕ್ಷಣೆ ಮಾಡುವುದು, ಸಂವಿಧಾನಿಕವಾದ ಮೌಲ್ಯಗಳಿಗೆ ಧಕ್ಕೆ ಮತ್ತು ಕೇಡು ಉಂಟಾಗದಂತೆ ಕಾಪಾಡುವುದು, ಕರ್ನಾಟಕದ ರಾಜ್ಯ ಮಾನ್ಯ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರ ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರ ವಿಧಿಬದ್ಧವಾದ ಕರ್ತವ್ಯ ಹಾಗು ಜವಾಬ್ಧಾರಿಯಾಗಿರುತ್ತದೆ. ಹಾಗು ಸದರಿಯವರು ಸಂವಿಧಾನಿಕವಾದ ಮೌಲ್ಯಗಳನ್ನು

ರಕ್ಷಣೆ ಮಾಡುವುದಾಗಿ ಪ್ರಮಾಣಿಸಿ ಗೌರವಾನ್ವಿತ ಮುಖ್ಯಮಂತ್ರಿ ಹಾಗೂ ಸಚಿವ ಸ್ಥಾನ ಅಲಂಕರಿಸಿರುತ್ತಾರೆ.

2. ಸರ್ಕಾರದ ಆಡಳಿತದಿಂದಾಗಲಿ, ಇತರೇ ಯಾರಿಂದಾಗಲಿ ಸಂವಿಧಾನದಲ್ಲಿನ ತತ್ವಾಂಶಗಳಿಗೆ ಮತ್ತು ಮೌಲ್ಯಗಳಿಗೆ ಧಕ್ಕೆ ಉಂಟಾಗಿದ್ದರೆ ಅದನ್ನು ಸರಿ ಪಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ತಗೆದು ಕೊಳ್ಳುವುದು, ಯಾರಿಂದಾಗಲಿ ಸಂವಿಧಾನದಲ್ಲಿನ ತತ್ವಾಂಶಗಳಿಗೆ ಮತ್ತು ಮೌಲ್ಯಗಳಿಗೆ ಧಕ್ಕೆ ಉಂಟಾಗಿದ್ದರೆ ಅದಕ್ಕೆ ಕಾರಣರಾದವರ ಮೇಲೆ ಸಂವಿಧಾನದ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮವಹಿಸಿ ಸೂಕ್ತ ಕ್ರಮ ತಗೆದು ಕೊಳ್ಳುವುದು ಕರ್ನಾಟಕದ ರಾಜ್ಯ ಮಾನ್ಯ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯರವರ ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರ ವಿಧಿಬದ್ಧವಾದ ಕರ್ತವ್ಯ ಹಾಗು ಜವಾಬ್ಧಾರಿಯಾಗಿರುತ್ತದೆ.

3. ಮುಂದುವರೆದು ತಮ್ಮಲ್ಲಿ ತಿಳಿಸುವುದೇನಂದರೆ ಕರ್ನಾಟಕ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮವೂ ರಾಜ್ಯ ಸರ್ಕಾರದ ಅಡಿಯಲ್ಲಿ ಹಿಂದಿನಿಂದಲೂ ಕರ್ನಾಟಕದ ನಾಗರಿಕ ಸೇವೆ ಸಲ್ಲಿಸುತ್ತಿರುವ ನಿಗಮವಾಗಿದ್ದು, ರಾಜ್ಯ ಸರ್ಕಾರದ ಅಡಿಯಲ್ಲಿ ನಿರ್ವಹಿಸುತ್ತಿರುವ ಹಲವಾರು ನಿಗಮ, ಮಂಡಲಿ ಇಲಾಖೆಗಳ ಸಿಬ್ಬಂದಿಗಳಿಗಿಂತಲೂ, ಹಾಗು ಪೋಲೀಸ್ ಇಲಾಖೆ ಸಿಬ್ಬಂದಿಗಳಿಗಿಂತಲೂ, ಸರ್ಕಾರಿ ನೌಕಕರಿಗಿಂತಲೂ ಸಾರಿಗೆ ನಿಗಮಗಳ ಸಿಬ್ಬಂದಿಗಳು ಕರ್ನಾಟಕದ ರಾಜ್ಯದ ನಾಗರಿಕ ಜನತೆಗೆ ಹಾಗೂ ಸಮಾಜಕ್ಕೆ ಉನ್ನತವಾದ, ಉತ್ಕೃಷ್ಟವಾದ, ಕಠಿಣವಾದ, ಶ್ರಮದಾಯಕವಾದ, ಪ್ರಾಣಕ್ಕೆ ಅಪಾಯಕರವಾದ ಕರ್ತವ್ಯಗಳನ್ನು ನಿರ್ವಹಿಸಿ ಕರ್ನಾಟಕದ ನಾಗರಿಕ ಜನತೆಗೆ ಸೇವೆ ಸಲ್ಲಿಸುತ್ತಿರುತ್ತಾರೆ. ಆದರೆ ಯಾರೋ ಕೆಲವರ ಹಿತಕ್ಕಾಗಿ, ಅಧಿಕಾರಿಗಳ ಹಿತಕ್ಕಾಗಿ, ಇನ್ಯಾವುದೋ ದುರುದ್ದೇಶಕ್ಕಾಗಿ ನ್ಯಾಯಾಯುತವಲ್ಲದ ನಿಯಮಗಳನ್ನು ರೂಪಿಸಿ, ಸಮಾನತೆಗೆ ಧಕ್ಕೆಯುಂಟಾಗುವ ನಿಯಮಗಳನ್ನು ರೂಪಿಸಿ, ಸಂವಿಧಾನದಲ್ಲಿನ ತತ್ವಾಂಶಗಳ ಮತ್ತು ಮೌಲ್ಯಗಳ ತತ್ವಗಳಿಗಳಿಗೆ ಧಕ್ಕೆಯುಂಟಾಗುವ ನಿಯಮಗಳನ್ನು ರೂಪಿಸಿ, ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ನಾಲ್ಕು ನಿಗಮಗಳ ನೌಕರರುಗಳಿಗೆ ವಿವಿಧ ರೀತಿಯಲ್ಲಿ ಹಿಂದಿನಿಂದಲೂ ಅನ್ಯಾಯಾಗಳಿಗೆ ಗುರಿಪಡಿಸಿ ದೌರ್ಜನ್ಯ ಒಳಪಡಿಸಲಾಗಿರುತ್ತದೆ ಹಾಗು ಅನ್ಯಾಯಾವನ್ನು ಸರಿಪಡಿಸದೇ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಅನ್ಯಾಯಾಗಳನ್ನು ಮುಂದುವರೆಸುತ್ತಿರುತ್ತಾರೆ.

4. ಸರ್ಕಾರವು ಸಾರಿಗೆ ನೌಕರರಿಗೆ ಮಾಡುತ್ತಿರುವ ಅನ್ಯಾಯಾಗಳ ವಿರುದ್ಧ ಇಸವಿ 2020 ಡಿಸೆಂಬರ್ ಮಾಹೆಯಲ್ಲಿ ಸಾರಿಗೆ ನೌಕರರು ಪ್ರತಿಭಟನೆ ಮಾಡಿದಾಗ ಅಂದಿನ ಉಪ ಮುಖ್ಯಮಂತ್ರಿಯಾದ ಮಾನ್ಯ ಲಕ್ಷ್ಮಣ ಸಂ. ಸವದಿರವರು ಉಲ್ಲೇಖ: " ಸಂಖ್ಯೆ:ಉಮು/ಸಾರಿಗೆ/3385/2020-21 ದಿನಾಂಕ:14-12-2020 ರಂತೆ 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರವು ಆರ್ಥಿಕ ಅಂಶಗಳನ್ನು ಪರಿಗಣಿಸಿ

ತೀಮಾನಿಸಲಾಗುವುದು." ಎಂದು ಲಖಿತವಾಗಿ ನೀಡಿ ನಂತರ ಸಾರಿಗೆ ನೌಕರರಿಗೆ ಸಮಾನ ವೇತನ ಜಾರಿ ಮಾಡುವ ಬಗ್ಗೆ ವಂಚನೆ ಮಾಡಿ ಅನ್ಯಾಯಾ ಮಾಡಿರುತ್ತಾರೆ.

5. ಕರ್ನಾಟಕ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮವೂ ರಾಜ್ಯ ಸರ್ಕಾರದ ಅಡಿಯಲ್ಲಿ ಹಿಂದಿನಿಂದಲೂ ಕರ್ನಾಟಕದ ನಾಗರಿಕ ಜನತೆಗೆ ಸೇವೆ ಸಲ್ಲಿಸುತ್ತಿರುವ ನಿಗಮವಾಗಿದ್ದು ರಾಜ್ಯ ಸರ್ಕಾರದ ಅಡಿಯಲ್ಲಿ ನಿರ್ವಹಿಸುತ್ತಿರುವ ಸರ್ಕಾರಿ ನೌಕರರುಗಳು ಮತ್ತು ಹಲವಾರು ನಿಗಮ ಮಂಡಲಿ ಇಲಾಖೆಗಳ ಸಿಬ್ಬಂದಿಗಳಿಗೆ ನೀಡುವಂತೆ ವೇತನ ಮತ್ತು ಪಿಂಚಣಿ ಸವಲತ್ತುಗಳು ಹಾಗೂ ಇತರೆ ಸವಲತ್ತುಗಳನ್ನು ಕರ್ನಾಟಕ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮದ ಸಿಬ್ಬಂದಿಗಳಿಗೆ ನ್ಯಾಯಾಯುತವಾಗಿ ನೀಡಬೇಕಾಗಿರುತ್ತದೆ ಹಾಗು ಇವುಗಳನ್ನು ಪಡೆಯುವುದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಿಬ್ಬಂದಿಗಳ ಹಕ್ಕು ಕೂಡವಾಗಿರುತ್ತದೆ. ಹಾಗು ಸ್ವಾಭಾವಿಕ ನ್ಯಾಯಾ ಕೂಡ ಆಗಿರುತ್ತದೆ. ಈ ರೀತಿ ಸಾರಿಗೆ ನೌಕರರಿಗೆ ಆಗುತ್ತಿರುವ ಅನ್ಯಾಯಾವನ್ನು ಸರಿಪಡಿಸದೇ ನಿರ್ಲಕ್ಷ್ಯ ತೋರಿ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಅನ್ಯಾಯಾಗಳನ್ನು ಮುಂದುವರೆಸಿ ಸಾರಿಗೆ ನೌಕರನ್ನು, ಅನ್ಯಾಯಾಗಳಿಗೆ ಹಾಗು ದೌರ್ಜನ್ಯಕ್ಕೆ ಒಳಪಡಿಸಿರುತ್ತಾರೆ.

6. ಆದರೆ ಕರ್ನಾಟಕದ ನಾಗರಿಕ ಜನತೆಗೆ ಸೇವೆ ಸಲ್ಲಿಸುತ್ತಿರುವ ಕರ್ನಾಟಕ ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮದ ಸಿಬ್ಬಂದಿಗಳನ್ನು ಆಸ್ಪೃಶ್ಯತೆಯಂತೆ ಪ್ರತ್ಯಕವಾಗಿ ಪರಿಗಣಿಸಿ ಸರ್ಕಾರದಿಂದ ಹಿಂದಿನಿಂದಲೂ ಸಾರಿಗೆ ಸಿಬ್ಬಂದಿಗಳಿಗೆ ವಂಚನೆ ಮಾಡಿ ಅನ್ಯಾಯ ಮಾಡುತ್ತಿರುವ ಅನ್ಯಾಯವು ಆಸ್ಪೃಶ್ಯತೆಯಂತಹ ಆಚರಣೆಗೆ ಸಮನಾದ ಅಪರಾಧವಾದುದಾಗಿರುತ್ತದೆ. ಸರ್ಕಾರದ ಇಲಾಖೆಗಳಲ್ಲಿನ ಹಾಗು ಇತರೆ ನಿಗಮಗಳಲ್ಲಿನ ಸಿಬ್ಬಂದಿಗಳಿಗೆ ನೀಡುವ ವೇತನ ಹಾಗು ಇತರೆ ನಿವೃತ್ತಿ ನಂತರದ ಸವಲತ್ತುಗಳನ್ನು, ಸಾರಿಗೆ ನಿಗಮಗಳಲ್ಲಿ ಸಿಬ್ಬಂದಿಗಳಿಗೆ ನೀಡುವ ವೇತನ ಹಾಗು ಸವಲತ್ತುಗಳನ್ನು ಎರಡನ್ನು ಹೋಲಿಕೆ ಮಾಡಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಸಿಬ್ಬಂದಿಗಳಿಗೆ ಹಿಂದಿನಿಂದಲೂ ಅಸಮಾನತೆಗೆ ಒಳಪಡಿಸಿ ತಾರತಮ್ಯ ಮಾಡಿ ಅನ್ಯಾಯ ಮಾಡಲಾಗಿರುತ್ತದೆ. ಇವುಗಳು ಭಾರತದ ಸಂವಿಧಾನದ ತತ್ವದ ವಿಧಿಯ ಸಮಾನತೆಯ ಮತ್ತು ಸಂವಿಧಾನದ ತತ್ವದ ವಿಧಿಯ ಇತರೆ ಮೌಲ್ಯಗಳನ್ನು ಉಲ್ಲಂಘಿಸಿರುವುದು, ಮಾಡಿರುವ ಅಪರಾಧ ಕೃತ್ಯವಾಗಿರುತ್ತದೆ. ಈ ರೀತಿಯ ಅನ್ಯಾಯಾವು ಅಪರಾಧ ಕೃತ್ಯವಾಗಿದ್ದರೂ ಸಹ ಸರಿಪಡಿಸದೇ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಅನ್ಯಾಯಾಗಳನ್ನು ಮುಂದುವರೆಸಿ ಅಪರಾಧ ಕೃತ್ಯವೆಸಗಿರುತ್ತಾರೆ.

7. ಮೇಲಿನಂತೆ ನಾಲ್ಕು ರಸ್ತೆ ಸಾರಿಗೆ ನಿಗಮದಲ್ಲಿ ಸಿಬ್ಬಂದಿಗಳಿಗೆ ಹಿಂದಿನಿಂದಲೂ ಅಸಮಾನತೆಗೆ ಒಳಪಡಿಸಿ ತಾರತಮ್ಯ ಮಾಡಿ ಅನ್ಯಾಯ ಮಾಡಲಾಗುತ್ತಿರುವ ಬಗ್ಗೆ ಈ ಹಿಂದಿನ ಮಾನ್ಯ ಮುಖ್ಯಮಂತ್ರಿಯವರುಗಳಿಗೆ, ಮಾನ್ಯ ಸಾರಿಗೆ ಸಚಿವರುಗಳಿಗೆ ಹಾಗು ಸರ್ಕಾರಿ ಅಧಿಕಾರಿಗಳಿಗೆ ಮತ್ತು ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರಿಗೆ ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರಿಗೆ ಹಾಗು ಸರ್ಕಾರಿ ಅಧಿಕಾರಿಗಳಿಗೆ ಗಮನಕ್ಕೆ ಬಂದರು ಸಹ ಮೇಲಿನಂತೆ ಸಾರಿಗೆ ಸಿಬ್ಬಂದಿಗಳಿಗೆ ಆಗುತ್ತಿರುವ ಅನ್ಯಾಯಗಳಿಗೆ ನ್ಯಾಯಾ ದೊರಕಸಿ ಕೊಡದೇ ಅನ್ಯಾಯಾಗಳನ್ನು ಮುಂದುವರೆಸಿ ಅಪರಾಧ ಕೃತ್ಯವೆಸಗಿರುತ್ತಾರೆ. ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಹಾಗು ಸರ್ಕಾರದ ಅಧಿಕಾರಿಗಳು ಸಂವಿಧಾನಿಕವಾದ ವಿಧಿಯನ್ನು ಪಾಲಿಸದೇ, ಹಾಗು ಕಾನೂನು ನಿಯಮಗಳನ್ನು ಪಾಲಿಸದೇ ಸಂವಿಧಾನ ಬಾಹಿರವಾಗಿ ಮತ್ತು ಕಾನೂನು ಬಾಹಿರವಾಗಿ ನಡೆದು ಕೊಂಡು ಉಲ್ಲಂಘನೆ ಮಾಡಿ ಹಾಗು ಸಾಮಾಜಿಕ ಅಸಮಾನತೆಗೆ ಕಾರಣರಾಗಿರುತ್ತಾರೆ. ಇದು ಬಿ.ಎನ್.ಎಸ್.-2023ರನ್ವಯ ಹಲವು ರಿತ್ಯಾ ಅಪರಾಧ ಕೃತ್ಯಗಳಾಗಿರುತ್ತವೆ.

8. ಕಳೆದ ವಿಧಾನ ಸಭೆ ಚುನಾವಣೆಯ ಪ್ರಚಾರ ಸಂಧರ್ಭದಲ್ಲಿ ಕಾಂಗ್ರೆಸ್ ಪಕ್ಷ ಗೆದ್ದು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸಾರಿಗೆ ಸಿಬ್ಬಂದಿಗಳಿಗೆ ಸರ್ಕಾರಿ ಸಿಬ್ಬಂದಿಗಳ ಸಮಾನ ವೇತನ ಜಾರಿ ತರುವುದಾಗಿ ಚುನಾವಣೆ ಪ್ರಣಾಳಿಕೆಯಲ್ಲಿ ತಿಳಿಸಿದ್ದು, ಅದರಂತೆ ಕರ್ನಾಟಕದ ಜನತೆ ಕಾಂಗ್ರೆಸ್ ಪಕ್ಷದ ಮೇಲೆ ಮತ್ತು ತಮ್ಮ ಮೇಲೆ ವಿಶ್ವಾಸವನ್ನು, ನಂಬಿಕೆಯನ್ನು ಇಟ್ಟು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿರುತ್ತಾರೆ. ನಂತರ ಅದರಂತೆ ಕಾಂಗ್ರಸ್ ಪಕ್ಷ ಗೆದ್ದು ಅಧಿಕಾರ ಹಿಡಿದು ಕಾಂಗ್ರೆಸ್ ಸರ್ಕಾರ ಸ್ಥಾಪಿತವಾದಗ ಕಾಂಗ್ರೆಸ್ ಸರ್ಕಾರ ಸರ್ಕಾರಿ ನೌಕರರಿಗೆ ಹಾಗು ಇತರೆ ಸರ್ಕಾರಿ ಸಂಸ್ಥೆ, ನಿಗಮ, ಮತ್ತು ಇತರೆ ಇಲಾಖೆಗಳಿಗೆ 7 ನೇ ವೇತನ ಆಯೋಗ ಶೀಫಾರಸ್ಸಿನ ವೇತನ ಜಾರಿ ಮಾಡಿ, ಆದರೆ ನಾಲ್ಕು ರಸ್ತೆ ಸಾರಿಗೆ ನೌಕರರಿಗೆ 7 ನೇ ವೇತನ ಆಯೋಗ ಶೀಫಾರಸ್ಸಿನ ವೇತನ ಜಾರಿ ಮಾಡದೇ ಕಾಂಗ್ರೆಸ್ ಸರ್ಕಾರದ ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಸಾರಿಗೆ ನೌಕರರಿಗೆ ವಂಚನೆ ಮಾಡಿ ಅಪರಾಧ ಕೃತ್ಯವೆಸಗಿರುತ್ತಾರೆ.

9. ನಾಲ್ಕು ರಸ್ತೆ ಸಾರಿಗೆ ನೌಕರರ ವೇತನ ಪರಿಷ್ಕರಣೆ ಬಗ್ಗೆ ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರ ಅಧ್ಯಕ್ಷತೆಯಲ್ಲಿ ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರ ಸಭೆಯಲ್ಲಿ ಸಂಘಟನೆಗಳು ನಡೆಸಲಾಗಿರುತ್ತದೆ. ಅಲ್ಲದೆ ಸಾರಿಗೆ ಸಚಿವರು ಹಾಗು ಇತರರುಗಳು ರಸ್ತೆ ಸಾರಿಗೆ ನೌಕರರ ವೇತನ ಪರಿಷ್ಕರಣೆ ಬಗ್ಗೆ ಮುಖ್ಯ ಮಂತ್ರಿಗಳ ಬಳಿ ಮಾತನಾಡುವುದಾಗಿ ಮೌಖಿಕವಾಗಿ

ಹೇಳಿರುತ್ತಾರೆ. ಅಂದರೆ ರಸ್ತೆ ಸಾರಿಗೆ ನೌಕರರ ವೇತನ ಪರಿಷ್ಕರಣೆ ಕಾರ್ಯದಲ್ಲಿ ಮುಂಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯರವರ ನಿರ್ಧಾರವೆ ಪ್ರಮುಖವಾಗಿರುತ್ತದೆ ಹಾಗು ಕೇಂದ್ರ ಬಿಂದು ಕೂಡ ಆಗಿರುತ್ತದೆ. ಆದರೆ ಕಾಂಗ್ರೆಸ್ ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿ ಸಾರಿಗೆ ನೌಕರರಿಗೆ ಸಮಾನ ವೇತನ ಜಾರಿ ಮಾಡುವುದಾಗಿ ಕಾಂಗ್ರೆಸ್ ಪಕ್ಷ ಹೇಳಿದಂತೆ ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಕಾಂಗ್ರೆಸ್ ಪಕ್ಷ ಸರ್ಕಾರ ರಚನೆಗೊಂಡರು ಚುನಾವಣೆ ಪ್ರಣಾಳಿಕೆಯಲ್ಲಿ ನುಡಿದಂತೆ ಈವರೆಗೂ ನಡೆದುಕೊಳ್ಳದೆ ಅಪರಾಧ ಕೃತ್ಯವೆಸಗಿರುತ್ತಾರೆ. ಅಲ್ಲದೆ ಸಂವಿಧಾನದ ವಿಧಿ ಉಲ್ಲಂಘನೆಯಾಗಿರುತ್ತದೆ ಹಾಗು ಸಾಮಾಜಿಕ ಅಸಮಾನತೆಯಾಗಿರುತ್ತದೆ ಮತ್ತು ದೇಶದ ಏಕತೆಗೆ ಧಕ್ಕೆಗೆ ಕಾರಣವಾಗಿರುತ್ತದೆ.

10. ಮೇಲಿನಂತೆ ಆಗಿರುವ ಮತ್ತು ಆಗುತ್ತಿರುವ ಅಸಂವಿಧಾನಕವಾದ ಅನ್ಯಾಯಗಳನ್ನು ಸರಿಪಡಿಸಿ ರಸ್ತೆ ಸಾರಿಗೆ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕರ್ನಾಟಕ ಸೇವಾ ನಿಯಮ ಪ್ರಕಾರ ಸಮಾನ ಹುದ್ದೆಗೆ ಸರ್ಕಾರಿ ನೌಕರರಿಗೆ ನೀಡುವಂತಹ ವೇತನ ಹಾಗು ಸರ್ಕಾರಿ ನೌಕರರಿಗೆ ನೀಡುವಂತಹ OPS & NPS ರೀತ್ಯಾ ನಿವೃತ್ತಿ ವೇತನ ಹಾಗು ಎಲ್ಲಾ ಸವಲತ್ತುಗಳನ್ನು ದೊರಕಿಸಿ ಕೊಡುವಂತೆ ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯರವರಿಗೆ ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರಿಗೆ ಕಾನೂನು ನೋಟಿಸ್ ನೀಡಿ ಮಾಡಿರುವ ಅಪರಾಧಕ್ಕೆ ನ್ಯಾಯಾಲಯದಲ್ಲಿ ದೂರು ದಾಖಲಿಸುವುದಾಗಿ ಕಾನೂನು ನೋಟಿಸ್‌ನಲ್ಲಿ ತಿಳಿಸಿರುತ್ತೇನೆ. ಆದರೆ ಸದರಿಯವರುಗಳು ಸಾರಿಗೆ ನೌಕರರುಗಳಿಗೆ ನ್ಯಾಯಾ ದೊರಕಿಸಿ ಕೊಟ್ಟಿರುವುದಿಲ್ಲ.

11. ರಸ್ತೆ ಸಾರಿಗೆ ಸಿಬ್ಬಂದಿಗಳಿಗೆ ಆಗಿರುವ ಅನ್ಯಾಯಾಗಳಿಗೆ ನ್ಯಾಯಾಯುತವಾದ ಪರಿಹಾರಗಳನ್ನು ನೀಡಲು ಮತ್ತು ದೊರಕಿಸಿ ಕೊಡಲು ಕರ್ನಾಟಕದ ಸಚಿವಾಲಯದಲ್ಲಿ ಹಾಗು ಕರ್ನಾಟಕ ಸರ್ಕಾರದ ಶಾಸಕಾಂಗದಲ್ಲಿ ಹಾಗೂ ಕಾರ್ಯಾಂಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾರ ಭಾಧ್ಯತೆಯು ಕೂಡ ಆಗಿರುತ್ತದೆ. ಆದರೆ ಸದರಿಯವರುಗಳು ಸಾರಿಗೆ ನೌಕರರುಗಳಿಗೆ ನ್ಯಾಯಾ ದೊರಕಿಸಿ ಕೊಟ್ಟಿರುವುದಿಲ್ಲ.

12. ಮೇಲಿನ ಕಂಡಿಕೆಗಳ ತಿಳಿಸಿರುವ ಅನ್ಯಾಯಾಗಳಿಗೆ ಪ್ರಸ್ತುತ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ಧರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ಕಾರಣರಾಗಿ ಭಾರತೀಯ ನ್ಯಾಯಾ ಸಂಹಿತೆ-2023 ಕಲಂ 2(1,7,9,14,15,24,25,37), 3(5,6,7,8,9) 51, 52, 53,59, 61, 198, 318, 324 ರಂತೆ ಹಾಗು ಇತರೆ ಕಲಂಗಳಂತೆ ಪ್ರಸ್ತುತ ಮುಖ್ಯಮಂತ್ರಿಗಳಾದ

ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಹಾಗು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರು ನನಗೆ ತಿಳಿದಂತೆ ಅಪರಾಧವೆಸಗಿರುತ್ತಾರೆ.

## ಪ್ರಾರ್ಥನೆ

ಮೇಲಿನ ಎಲ್ಲಾ ಸಕಾರಣಗಳಿಂದ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರ ವಿರುದ್ಧ ಮತ್ತು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರ ವಿರುದ್ಧ ಭಾರತೀಯ ನ್ಯಾಯಾ ಸಂಹಿತೆ-2023 ಕಲಂ 2(1,7,9,14,15,24,25,37), 3(5,6,7,8,9) 51, 52, 53, 59, 61, 198, 318, 324, ರಂತೆ ದೂರು ದಾಖಲಿಸಿ ನ್ಯಾಯಾಧೀಕರಣ ವಿಚಾರಣೆಗೆ ಒಳಪಡಿಸಲು ನನಗೆ ಅನುಮತಿ ನೀಡುವಂತೆ ನ್ಯಾಯಾ ಮತ್ತು ಸಮಾನತೆಗಳನ್ವಯ ತಮ್ಮಲ್ಲಿ ಈಗಾಗಲೇ ಪ್ರಾರ್ಥಿಸಿಕೊಂಡಿರುತ್ತೇನೆ ಆದರೆ ತಾವೂ ಈವರೆಗೂ ಅನುಮತಿ ನೀಡಿರುವುದಿಲ್ಲ ಇದರಿಂದ ನ್ಯಾಯ ಮತ್ತು ಸಮಾನತೆಗಳನ್ವಯ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಮಾಡಿರುವ ಅಪರಾದಗಳಿಗೆ ಅವರ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲಿಸಲು ತೊಡಕಾಗಿರುತ್ತದೆ. ಆದರಿಂದ ತಾವೂ ನ್ಯಾಯ ಮತ್ತು ಸಮಾನತೆಗಳನ್ವಯ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರು ಮಾಡಿರುವ ಅಪರಾದಗಳಿಗೆ ಅವರ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲಿಸಲು ಅನುಮತಿ ನೀಡುವಂತೆ ಈ ಮೂಲಕ ಮತ್ತೊಂಮ್ಮೆ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಅರ್ಜಿ ತಮಗೆ ತಲುಪಿದ 07 ದಿನಗಳಲ್ಲಿ ನನಗೆ ಅನುಮತಿ ನೀಡದಿರಲು ಸಕಾರಣ ನೀಡುವಂತೆ ಕೋರುತ್ತೇನೆ ತಾವೂ ಸಕಾರಣ ನೀಡದಿದ್ದಲ್ಲಿ ತಮ್ಮಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ಪರಿಗಣಿಸಿ ನಾನು ನೇರವಾಗಿ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರ ವಿರುದ್ದ ಘನ ನ್ಯಾಯಾಲಯದಲ್ಲಿ ಕಾನೂನು ರಿತ್ಯಾ ದೂರು ದಾಖಲಿಸುವುದಾಗಿ ಈ ಮೂಲಕ ತಮ್ಮ ಗಮನಕ್ಕೆ ತಂದಿರುತ್ತೇನೆ.

ವಂದನೆಗಳೊಂದಿಗೆ

ಸ್ಥಳ:- ಬೆಂಗಳೂರು.

ದಿನಾಂಕ:- 25/02/2026.

ಇಂತಿ ತಮ್ಮ ವಿಶ್ವಾಸಿ

Ananda

(ಆನಂದ) 7406626679

ಅರ್ಜಿದಾರರು

ಮಾಜಿ, ಅಧ್ಯಕ್ಷ, ಬಿ.ನಾ. 95, ಘಟಕ-16

**ಅಡಕ:** ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯರವರ ವಿರುದ್ಧ ಮತ್ತು ಸಾರಿಗೆ ಸಚಿವರಾದ ಶ್ರೀ ರಾಮಲಿಂಗರೆಡ್ಡಿರವರ ವಿರುದ್ದ ದೂರು ದಾಖಲಿಸಿ ನ್ಯಾಯಾಧೀಕರಣ ವಿಚಾರಣೆಗೆ ಒಳಪಡಿಸಲು ನನಗೆ ಅನುಮತಿ ನೀಡುವಂತೆ ಈ ಹಿಂದೆ ಸಲ್ಲಿಸಿರುವ ಅರ್ಜಿಯ ನಕಲು ಪ್ರತಿ.